# VIJAYANAGAR DISABLED WELFARE ASSOCIATION®

(VIKASA SPECIAL SCHOOL)

9th main, R.P.C. Layout, (Near Vishwakarma Temple) vijayanagar 2nd stage
Hampinagar, Bangalore - 560104


## 2020-21ನೇ ಸಾಲಿನ ವಾರ್ಷಿಕ ವರದಿ

2020-21 ನೇ ವರ್ಷದ ಶೈಕ್ಷಣಿಕ ವರ್ಷವು ಪ್ರತಿ ವರ್ಷದಂತೆ ಪ್ರಾರಂಭವಾಗಲಿಲ್ಲ Covid – 19 ಕೊರೋನ ವೈರಸ್ ಹೆಮ್ಮಾರಿಯನ್ನು ತಡೆಗಟ್ಟುವ ಸಲುವಾಗಿ ದೇಶದೆಲ್ಲೆಡೆ ಲಾಕ್‌ಡೌನ್ ಘೋಷಣೆ ಹಿನ್ನಲೆಯಲ್ಲಿ ನಿಗದಿತ ದಿನಗಳಲ್ಲಿ ಶಾಲೆಗಳು ಶೈಕ್ಷಣಿಕ ವರ್ಷವು ಪ್ರಾರಂಭವಾಗಲಿಲ್ಲ. ನಂತರ ಅನ್‌ಲಾಕ್ ಆದ ಬಳಿಕ ಮಕ್ಕಳಿಲ್ಲದೆ ಶಾಲೆಗಳನ್ನು ತೆರೆದು ಶಾಲಾ ಸಿಬ್ಬಂದಿಗಳು ಶಾಲಾ ಸ್ವಚ್ಚತಾಕಾರ್ಯ, ಹೊಸದಾಗಿ ಶಾಲೆಗೆ ಸುಣ್ಣ ಬಣ್ಣವನ್ನು ಮಾಡಿಸಲಾಯಿತು. ಶಿಕ್ಷಕರು ಕಲಿಕೋಪಕರಣಗಳ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲಾಯಿತು. ಕೊರೋನಾ ವೈರಸ್ ಹರಡುವಿಕೆ ಹೆಚ್ಚಾದ ಕಾರಣ ಸರ್ಕಾರ ಮಕ್ಕಳನ್ನು ಶಾಲೆಗೆ ಹೋಗಲು ಅನುಮತಿಯನ್ನು ನೀಡಲಿಲ್ಲ. ಇವೆಲ್ಲದರ ಮದ್ಯೆಯು ಶಾಲಾ ಸಿಬ್ಬಂದಿಗಳು ಪ್ರತಿನಿತ್ಯ ಶಾಲೆಗೆ ಬಂದು ಮಕ್ಕಳಿಗೆ ಪೋನ್ ಕರೆಗಳನ್ನು ಮಾಡಿ ಮಕ್ಕಳ ಯೋಗ ಕ್ಷೇಮದ ಬಗ್ಗೆ ಪೋಷಕರೊಂದಿಗೆ ಮಾತನಾಡುತ್ತ ಕೊವಿಡ್-19 ಇದರ ಬಗ್ಗೆ ಅರಿವು ಮೂಡಿಸುತ್ತ ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ಬಗ್ಗೆ ತಿಳಿಸಲಾಯಿತು. ಜೂನ್-ಜುಲೈ ತಿಂಗಳು ಕಳೆದರು ಮಕ್ಕಳು ಶಾಲೆಗೆ ಬರಲು ಅನುಮತಿಯಿಲ್ಲದ ಕಾರಣದಿಂದ ಮಕ್ಕಳು ಮನೆಯಲ್ಲಿಯೇ ಚಟುವಟಿಕೆಗಳನ್ನು ಪೋಷಕರೊಂದಿಗೆ ಮಾಡಿಸಲು Whatsapp ಗ್ರೂಪ್ ಮಾಡಿ ಸುಲಭವಾಗಿ ಮನೆಯಲ್ಲಿ ಸಿಗುವ ವಸ್ತುಗಳಿಂದ ಮಾಡಬಹುದಾದ ಚಟುವಟಿಕೆಗಳನ್ನು Whatsapp ವಿಡಿಯೋ ಮೂಲಕ ಶಿಕ್ಷಕರು ಕಳುಹಿಸಿದ ಚಟುವಟಿಕೆಗಳನ್ನು ಪೋಷಕರು ಮಕ್ಕಳಿಂದ ಮಾಡಿಸಲು ತಿಳಿಸಲಾಯಿತು. ನಂತರ ಪೋಷಕರು ಮಕ್ಕಳಿಂದ ಮಾಡಿಸಿ Whatsapp ಗ್ರೂಪಿಗೆ ಹಾಕಲು ತಿಳಿಸಿ ನಿರಂತರವಾಗಿ ಚಟುವಟಿಕೆಗಳನ್ನು ಮುಂದುವರೆಸಲಾಯಿತು. ಇದರಿಂದ ಶಿಕ್ಷಕರ ಮತ್ತು ಮಕ್ಕಳ ಸಂಬಂಧವನ್ನು ಬೆಸೆಯುವ ಕಾರ್ಯವಾಯಿತು. ಇದರ ಜೊತೆಗೆ ಪೊಷಕರನ್ನು ಶಾಲೆಗೆ ಕರೆಸಿ ಮಕ್ಕಳಿಗೆ ಮನೆಯಲ್ಲಿಯೇ ಸಾದ್ಯವಾಗುವ ಚಟುವಟಿಕೆಗಳ ಜೊತೆ ಬೇಕಾಗುವ ಪುಸ್ತಕಗಳು ಮತ್ತು ಇತರೆ ಸಮಾಗ್ರಿಗಳನ್ನು ನೀಡಿ ಪ್ರತಿ ನಿತ್ಯ ಮಗು ಮಾಡುವಂತಹ ಚಟುವಟಿಕೆಗಳಾದ ಬರವಣಿಗೆ, ಓದುವುದು, ಸುಲಭ ಗಣಿತ, ಚಿತ್ರಕಲೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪೋಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಪೋಷಕರಿಗೆ ಸಹಕಾರ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ. ಶಾಲೆಯಲ್ಲಿ ನಡೆಯುವ ಎಲ್ಲಾ ರಾಷ್ಟ್ರೀಯ ಹಬ್ಬಗಳು, ಜಯಂತಿಗಳು ಹಾಗೂ ಸ್ಥಳೀಯ ನಾಡ ಹಬ್ಬಗಳ ಆಚರಣೆ ಕಾರ್ಯಕ್ರಮಗಳನ್ನು ಮುಂದುವರೆಸುತ್ತ 2020-21ನೇ ಶೈಕ್ಷಣಿಕ ವರ್ಷವನ್ನು ಕೊರೋನ ಜೊತೆಯಲ್ಲೇ ಸಾಗುತ್ತ ಹೋಗುತ್ತಿದ್ದೇವೆ.

1. ದಿ.01-06-2020-ರಿಂದ ಶಾಲಾ ಸಿಬ್ಬಂದಿಗಳು ಹಾಜರಾಗಿ ಶಾಲಾ ಸ್ವಚ್ಚತಾಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.
2. ದಿ.05-06-2020 **ವಿಶ್ವಪರಿಸರ ದಿನಾಚರಣೆ**ಯನ್ನು ಆಚರಿಸಲಾಯಿತು.
3. ದಿ.15-06-2020 ರಂದು ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಸಭೆ ನಡೆಸಲಾಯಿತು.
4. ದಿ.17-06-2020 ರಂದು ಶಾಲಾ ಮಕ್ಕಳ ಪೋಷಕರೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ಮಾಡಲಾಯಿತು.
5. ದಿ.21-06-2020 ರಂದು ಅಂತ್‌ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.
6. ದಿ.14-07-2020ರಿಂದ 21-07-2020ರವರೆಗೆ Covid – 19 ಕೊರೋನ ವೈರಸ್ ಬೆಂಗಳೂರು ನಗರದಲ್ಲಿ ಹೆಚ್ಚಾದ ಕಾರಣ ಒಂದು ವಾರಗಳ ಕಾಲ ಲಾಕ್‌ಡೌನ್ ಘೋಷಣೆ ಪ್ರಯುಕ್ತ ರಜೆ ನೀಡಲಾಯಿತ್ತು.

7. ದಿ.17-07-2020ರಂದು ಸೇವಾ-ಇನ್-ಆಕ್ಷನ್ ಸಂಸ್ಥೆಯಿಂದ ಪ್ರತಿವರ್ಷ ನಡೆಸುವ **Quiz Abled Knowledge** ನಡೆಸಿಕೊಡುವ ಪ್ರಯುಕ್ತ ಒಂದು ದಿನದ **Online Webex Meeting** ನಲ್ಲಿ ಶಿಕ್ಷಕರು ಪಾಲ್ಗೊಳ್ಳಲಾಗಿತ್ತು.
8. **ದಿ.15-08-2020ರಂದು** ನಮ್ಮ ರಾಷ್ಟ್ರೀಯ ಹಬ್ಬ 74ನೇ **ಸ್ವಾತಂತ್ರ್ಯ ದಿನಾಚರಣೆಯನ್ನು** ಆಚರಿಸಲಾಯಿತು.
9. **ದಿ.27-08-2020ರಂದು ಗಣೇಶ ಪ್ರತಿಷ್ಠಾಪನೆ ಮಾಡಿ ಸರಳವಾಗಿ ಆಚರಿಸಿ ವಿಸರ್ಜಿಸಲಾಯಿತು.**
10. **ದಿ.28-08-2020ರಂದು Quiz Abled Knowledge** ಕಾರ್ಯಕ್ರಮವನ್ನು **Online** ನಲ್ಲಿ **ನಡೆಸಿಕೊಡುವ** ಬಗ್ಗೆ ಸಭೆಯಲ್ಲಿ ಪಾಲ್ಗೊಳ್ಳಲಾಗಿತ್ತು.
11. **ದಿ.02-09-2020ರಂದು** ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಸಭೆ ನಡೆಸಲಾಯಿತು.
12. ದಿ.05-09-2020ರಂದು ಶಾಲೆಯಲ್ಲಿ ಶಿಕ್ಷಕರ ದಿನಚರಣೆಯನ್ನು ಆಚರಿಸಲಾಯಿತು.
13. ದಿ.02-10-2020ರಂದು 152ನೇ **ಗಾಂಧಿ ಜಯಂತಿ** ದಿನಾಚರಣೆಯನ್ನು ಆಚರಿಸಲಾಯಿತು.
14. ದಿ.03-10-2020ರಿಂದ 16-10-2020ರವರೆಗೆ ಪೋಷಕರನ್ನು ಶಾಲೆಗೆ ಕರೆಸಿ ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ನೀಡಿ ಮಕ್ಕಳಿಂದ ಮಾಡಿಸಲು ಬೇಕಾದ ಸಾಮಗ್ರಿಗಳನ್ನು ವಿತರಿಸಲಾಯಿತು.
15. ದಿ.19-10-2020ರಿಂದ 31-10-2020ರವರೆಗೆ ಮಧ್ಯಂತರ (ದಸರಾ) ರಜೆ ನೀಡಲಾಯಿತು.
16. ದಿ.01-11-2020ರಂದು ಶಾಲೆಯಲ್ಲಿ **ಕನ್ನಡ ರಾಜ್ಯೋತ್ಸವ** ದಿನಾಚರಣೆ ಆಚರಿಸಲಾಯಿತು.
17. ದಿ.03-11-2020ರಿಂದ 10-11-2020ರವರೆಗೆ ಪೋಷಕರನ್ನು ಶಾಲೆಗೆ ಕರೆಸಿ ಮಕ್ಕಳಿಗೆ ಹೋಮ್‌ವರ್ಕ್ ನೀಡಲಾಯಿತು ಹಾಗೂ Whatsapp ಗ್ರೂಪ್‌ನಲ್ಲಿ ನೀಡಿದ ಚಟುವಟಿಕೆಗಳನ್ನು ನಿರಂತರ ಅಭ್ಯಾಸ ಮಾಡಿಸಲು ತಿಳಿಸಲಾಯಿತು.
18. ದಿ. 04-11-2020ರಂದು ALIMCO ಬೆಂಗಳೂರುರವರು ವಿಕಲಚೇತನ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನಮ್ಮ ಶಾಲೆಯ ಮಕ್ಕಳಿಗೆ MR Kit ಗಳನ್ನು ವಿತರಿಸಿದರು.
19. ದಿ.23-11-2020ರಂದು ಶ್ರೀ. ಪುಟ್ಟಪರ್ತಿ ಸಾಯಿಬಾಬಾ ಜಯಂತಿಯನ್ನು ಮತ್ತು ಶಾಲೆಯಲ್ಲಿ ಆಯುಧ ಪೂಜಾ ಕಾರ್ಯಕ್ರಮ ಆಚರಿಸಲಾಯಿತು.
20. ದಿ.27-11-2020ರಂದು ರೋಟರಿ ಕ್ಲಬ್ ಬೆಂಗಳೂರುರವರು ನಮ್ಮ ಶಾಲಾ ಮಕ್ಕಳಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.
21. ದಿ.03-12-2020ರಂದು **ವಿಶ್ವ ಅಂಗವಿಕಲರ ದಿನಾಚರಣೆ** ಮತ್ತು **ಕನಕದಾಸ ಜಯಂತಿ** ಆಚರಿಸಲಾಯಿತು.
22. ದಿ.06-12-2020ರಂದು ರೈಲ್ವೆ ಇಂಜಿನಿಯರ್‌ಗಳ ಸಂಘ ಕಂಟೋನ್ಮೆಂಟ್ ರೈಲು ಶಿವಾಜಿನಗರ ಬೆಂಗಳೂರು ರವರು ಆಯೋಜಿಸಿದ **ಅಂಬೇಡ್ಕರ್‌ರವರ ಪರಿನಿರ್ವಾಣ ದಿವಸವನ್ನು** ಆಚರಿಸಲಾಯಿತು.
23. ದಿ.07-12-2020ರಂದು ಶಾಲಾ ಮಕ್ಕಳ ಪೋಷಕರೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿ ಅಭಿಪ್ರಾಯ ಸಂಗ್ರಹ ಮಾಡಲಾಯಿತು.
24. ದಿ.08-12-2020ರಂದು ಶಾಲಾ ಮಕ್ಕಳ ಪೋಷಕರೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿ ಅಭಿಪ್ರಾಯ ಸಂಗ್ರಹ ಮಾಡಲಾಯಿತು.
25. ದಿ.15-12-2020ರಂದು ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಸಭೆ ನಡೆಸಲಾಯಿತು.
26. ದಿ.23-12-2020ರಂದು zoom meeting ನಲ್ಲಿ ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅದಿನಿಯಮ -2016 ಮತ್ತು ಮಾನಸಿಕ ಆರೋಗ್ಯ ಅದಿನಿಯಮ-2017ರ ಸೂಕ್ಷ್ಮತೆ ಕುರಿತಾದ ಮಾಹಿತಿ ಸಭೆಯಲ್ಲಿ ಪಾಲ್ಗೊಳ್ಳಲಾಯಿತು.
27. ದಿ. 24-12-2020ರಂದು Googal meet ಮೀಟ್ ಕಾರ್ಯಕ್ರಮದಲ್ಲಿ ಜನವರಿ1, 2021ರಿಂದ ಜಾರಿಯಾಗುತ್ತಿರುವ ಪರಿಷ್ಕೃತ ವಿದ್ಯಾಗಮ ಕಲಿಕಾ ಕಾರ್ಯಕ್ರಮವನ್ನು ವಿಶೇಷ ಶಾಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಮಾನ್ಯ ನಿರ್ದೇಶಕರಾದ ಮುನಿರಾಜು ಸರ್ ರೊಂದಿಗ ಬೆಳಿಗ್ಗೆ 11ರಿಂದ11.30ರೊಳಗೆ ವಿಡಿಯೋ ಕಾನ್ಪರೆನ್ಸ್ ಮೂಲಕ ನಡೆದ ಸಭೆಯಲ್ಲಿ ಪಾಲ್ಗೊಳ್ಳಲಾಯಿತು.ಮಾಹಿತಿ ಸಂಗ್ರಹ ಮಾಡಲಾಯಿತು.

28. ದಿ 01/01/2021ರಂದು **ಹೊಸ ವರ್ಷಾಚರಣೆಯನ್ನು** ಆಚರಿಸಲಾಯಿತು.

29. ದಿ. 07-01-2021 ಮತ್ತು 08-01-2021ರಂದು ದೂರವಾಣಿ ಮೂಲಕ ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಪೋಷಕರ ಅಭಿಪ್ರಾಯ ಸಂಗ್ರಹಿಸಲಾಯಿತು.

30. ದಿ. 18-01-2021 ರಂದು CRC ದಾವಣಗೆರೆ ಸಂಸ್ಥೆಯಿಂದ TLM Kit ವಿತರಣೆ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ 04 ಮಕ್ಕಳಿಗೆ TLM Kit ವಿತರಿಸಿದರು.

31. ದಿ. 23-01-2021 ರಂದು On line ನಲ್ಲಿ ಸೇವಾ- ಇನ್- ಆಕ್ಷನ್‌ರ್‌ರವರು ಆಯೋಜಿಸಿದ್ದ Quiz Abled ಸ್ಪರ್ಧೆಯಲ್ಲಿ ನಮ್ಮ ಶಾಲೆಯ 06 ಮಕ್ಕಳು ಬಾಗವಹಿಸಿ ಪಡೆಯಲಾಯಿತು.

32. ದಿ. 24-01-2021 ರಂದು ಕ್ರಿಸ್‌ಮಸ್ ಆಚರಣೆಯನ್ನು ಮದರ್‌ಥೆರೇಸಾ ಚರ್ಚ ಗುಡ್ಡದಳ್ಳಿ ರವರು ನಮ್ಮ ಶಾಲೆಯಲ್ಲಿ ಆಚರಿಸಲಾಯಿತು ನಮ್ಮ ಶಾಲೆಯ 20 ಮಕ್ಕಳಿಗೆ ಆಹಾರ ದಾನ್ಯಗಳ ಕಿಟ್ ವಿತರಿಸಲಾಯಿತು.

33. ದಿ. 26-01-2021 ರಂದು 72ನೇ ಗಣರಾಜ್ಯೋತ್ಸವ ದಿನಾಚಣೆಯನ್ನು ಆಚರಿಸಲಾಯಿತು.

34. ದಿ. 11-02-2021ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ವಿಶ್ವವಿಕಲರ ಚೇತನರ ಹಾಗು ಹಿರಿಯ ನಾಗರೀಕರ ದಿನಾಚರಣೆಯಲ್ಲಿ ಸಂಸ್ಥೆಯ ಮುಖ್ಯಸ್ಥರು ಹಾದೂ ಶಾಲೆಯ ಸಿಬ್ಬಂದಿ ವರ್ಗದವರು ಭಾಗವಹಿಸಲಾಯಿತು.

35. ದಿ. 21-02-2021ರ ಭಾನುವಾರ ದಂದು All India SC,ST Railway Employees Association Bengaluru, Vijayanagar Hospital , Maruthi medica,l vijayanagara ಇವರುಗಳ ಸಹಯೋಗದೊಂದಿಗೆ ನಮ್ಮ ಶಾಲೆಯಲ್ಲಿ Medical Camp ಹಮ್ಮಿಕೊಳ್ಳಲಾಗಿತ್ತು ಈ ವೈದ್ಯಕೀಯ ಶಿಬಿರದಲ್ಲಿ ಮಕ್ಕಳಿಗೆ ಮತ್ತು ಪೋಷಕರಿಗೆ BP, Blood(sugur), Checkup, ಹೃದಯ ಸಂಬಂದೀ ಕಾಯಿಲೆ, ಕಣ್ಣು, ಚರ್ಮ, ಹಲ್ಲಿಗೆ ಸಂಭಂದಿಸಿದ ಎಲ್ಲಾ ರೀತಿಯ ತಪಾಸಣೆ ಮಾಡಲಾಯಿತು ಇದರ ಜೊತೆಗೆ ಮಕ್ಕಳ ಪೋಷಕರಿಗೆ ಕೌನ್ಸಿಲಿಂಗ್ ಕೂಡ ಮಾಡಲಾಯಿತು.

36. ದಿ. 26-02-2021 ಮತ್ತು 27-02-2021 ರಂದು ಶಾಲಾ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ಮಡಿಕೇರಿ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ 2 ದಿನದ ಪ್ರವಾಸವನ್ನು ಕೈಗೊಳ್ಳಲಾಗಿತ್ತು.

37. ದಿ. 14-04-2021 ರಂದು ಅಂಬೇಡ್ಕರ್ ಜಯಂತಿಯನ್ನು ಶಾಲೆಯಲ್ಲಿ ಸರಳವಾಗಿ ಆಚರಿಸಲಾಯಿತು.

38. ದಿ. 28-04-2021 ರಿಂದ ಕೋವಿಡ್ 19 2ನೇ ಅಲೆಯ ಸಾಕ್ರಾಂಮಿಕ ರೋಗದ ತೀವ್ರತೆ ಹಿನ್ನಲೆಯಲ್ಲಿ ಸರ್ಕಾರದ ಆದೇಶದನ್ವಯ ಶಾಲೆಯನ್ನು ಬಂದ್ ಮಾಡಲಾಯಿತು.

39. ದಿ. 28-05-2021 ಮತ್ತು 29-05-2021 ರಂದು ಶಾಲೆಯಲ್ಲಿ 18 ವರ್ಷ ಮೇಲ್ಪಟ್ಟ ಮಕ್ಕಳಿಗೆ ಮತ್ತು ಆರೈಕೆದಾರರಿಗೆ ಮತ್ತು ಸಿಬ್ಬಂದಿಗಳಿಗೆ ಕೋವಿಡ್ -19 ಲಸಿಕೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯು ಮೇಲಿನ ಶಾಲಾ ಚಟುವಟಿಕೆಗಳ ಜೊತೆ ರೋಟರಿಕ್ಲಬ್, ಇನ್ನರ್‌ವೀಲ್‌ಕ್ಲಬ್, ಲಯನ್ಸ್‌ಕ್ಲಬ್ ಹಾಗೂ ಸರ್ಕಾರೇತರ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಣ್ಣಿನ ತಪಾಸಣೆ ಶಿಬಿರ, ದಂತ ತಪಾಸಣೆ ಶಿಬಿರ, ಆರೋಗ್ಯ ಶಿಬಿರ ಮತ್ತು ವಿಕಲಚೇತನರಿಗೆ/ ಹಿರಿಯ ನಾಗರೀಕರಿಗೆ ದೊರೆಯುವ ಸರ್ಕಾರಿ ಸೌಲಭ್ಯಗಳು ನೆರವಿನ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು, ಮಹಿಳೆಯರು ಹಾಗೂ ಹಿಂದುಳಿದ ಮಕ್ಕಳು ಸಮಾಜದ ನಿರ್ಲಕ್ಷಕ್ಕೆ ಒಳಗಾದ ಸಮುದಾಯಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಉತ್ತಮ ಆರೋಗ್ಯಕರವಾದ ಸಮಾಜವನ್ನು ನಿರ್ಮಿಸುವಲ್ಲಿ ಸಂಸ್ಥೆಯು ಅಳಿಲು ಸೇವೆಯನ್ನು ಮಾಡುತ್ತಾ ಬರುತ್ತಿದೆ.

ತಮ್ಮ ವಿಶ್ವಾಸಿ

(ಎ.ಎಂ.ಉಮಾ)
ಕಾರ್ಯದರ್ಶಿ

# VIJAYANAGAR DISABLED WELFARE ASSOCIATION®
(VIKASA SPECIAL SCHOOL)
9th main, R.P.C. Layout, (Near Vishwakarma Temple) vijayanagar 2nd stage, Hampinagar, Bangalore - 560104


## 2019-20ನೇ ಸಾಲಿನ ವಾರ್ಷಿಕ ವರದಿ

1. ದಿ. 20.05.2019-ರಂದು ಶಾಲೆಯನ್ನು ಪ್ರಾರಂಭಿಸಲಾಯಿತು ದಿನಾಂಕ 20-05-2019 ಮತ್ತು 21-05 2019 ರಂದು ಶಾಲಾ ಸ್ವಚ್ಛತ ಕಾರ್ಯಕ್ರಮ.
2. ದಿ. 22-05-2019 ರಿಂದ 31-05-2019ವರೆಗೂ ಮಕ್ಕಳ ದಾಖಲಾತಿ ಸಮೀಕ್ಷೆ ನಡೆಸಲಾಯಿತು.
3. ದಿ. 03.05.2019- ರಿಂದ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಲಾಯಿತು.
4. ದಿ. 05.06.2019-**ವಿಶ್ವಪರಿಸರ ದಿನಾಚರಣೆ** ಅಂಗವಾಗಿ ಮಕ್ಕಳಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
5. ದಿ. 21.06.2018-ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದ್ದು. ಮಕ್ಕಳು ಯೋಗ ಮಾಡಿ ಪ್ರಮಾಣಪತ್ರ ಮತ್ತು ಬಹುಮಾನವನ್ನು ಪಡೆದಿರುತ್ತಾರೆ.
6. ದಿ. 27.07.2019-**ಪೋಷಕರ ಸಭೆಯನ್ನು** ಏರ್ಪಡಿಸಿ ಪೋಷಕರೊಂದಿಗೆ ಮಕ್ಕಳ ಸಮಸ್ಯೆಗಳ ಬಗ್ಗೆ ಮನೋವೈದ್ಯರಿಂದ ಆಪ್ತಸಮಾಲೋಚನೆ.
7. ದಿ.15.08.2019-ಶಾಲಾ ಆವರಣದಲ್ಲಿ ನಮ್ಮ ರಾಷ್ಟ್ರೀಯ ಹಬ್ಬ **ಸ್ವಾತಂತ್ರ್ಯ ದಿನಾಚರಣೆಯನ್ನು** ಆಚರಿಸಲಾಯಿತು.
8. ದಿ. 24-08-2019 ಪೋಷಕರ ಮಾಸಿಕ ಸಭೆ ನಡೆಸಲಾಯಿತು
9. ದಿ. 31-08-2019 ರಂದು **Laugh- N- Roll School** ನಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಲಾಯಿತು.
10. ದಿ. 05.09.2019- **ಶಿಕ್ಷಕರ ದಿನಾಚರಣೆ** ಕಾರ್ಯಕ್ರಮವನ್ನು ನಡೆಸಲಾಯಿತು.
11. ದಿ.15-09-2019 **ಪೊಕ್ಕರಣೆ ಸೇವಾ ಟ್ರಸ್ಟ್** ರವರು ನಯನ ಸಭಾಂಗಣದಲ್ಲಿ ಆಯೋಜಿಸಿದ **ಸಂಸ್ಕೃತಿ ವಿಜ್ಞಾನದ ಕಡೆ** ಕಾರ್ಯಕ್ರಮದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು.
12. ದಿ. 02.10.2019-**ಗಾಂಧಿಜಯಂತಿ** ದಿನಾಚರಣೆಯನ್ನು ಆಚರಿಸಲಾಯಿತು.
13. ದಿ. 04-10-2019 **ಆಯುಧ ಪೂಜೆ** ಶಾಲೆಯಲ್ಲಿ ಆಚರಿಸಲಾಯಿತು.
14. ದಿ. 05-10-2019 ರಿಂದ 15-10-2019 ವರಿಗೆ **ದಸರ ರಜೆ** ನೀಡಲಾಯಿತು.
15. ದಿ. 26-10-2019 **ಪೋಷಕರ ಮಾಸಿಕ ಸಭೆ** ನಡೆಸಲಾಯಿತು.
16. ದಿ. 11-11-2019 **ಸೇವಾ-ಇನ್- ಆಕ್ಷನ್** ಸಂಸ್ಥೆಯವರು ನಡೆಸಿದ **Quiz Abled Knowledge** ಕಾರ್ಯಕ್ರಮದಲ್ಲಿ ಭಾಗವಹಿಸಿದೆವು.
17. ದಿ.13-11-2019 **ಪೊಕ್ಕರಣೆ ಸೇವಾ ಟ್ರಸ್ಟ್** ರವರು ನಮ್ಮ ಶಾಲೆಯಲ್ಲಿ ಆಯೋಜಿಸಿದ **ಚಿತ್ರಕಲೆ** ಕಾರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸಿದರು.
18. ದಿ.15-11-2019ರಂದು ಶಾಲೆಯಲ್ಲಿ **ಕನಕದಾಸ ಜಯಂತಿಯನ್ನು** ಆಚರಿಸಲಾಯಿತ
19. **ವಿಶ್ವ ವಿಕಲಚೇತನರ ದಿನಾಚರಣೆ** ಅಂಗವಾಗಿ ದಿ.26-11-2019 ಕಂಠೀರವ ಸ್ಟೇಡಿಯಂನಲ್ಲಿ **ಕ್ರೀಡಾಕೂಟ**, ದಿ.28-11-2019ರಂದು ಬಾಲಭವನ ಕಬ್ಬನ್ ಪಾರ್ಕ್‌ನಲ್ಲಿ **ಸಾಂಸ್ಕೃತಿಕ ಕಾರ್ಯಕ್ರಮ**, ದಿ. 29-11-2019 ರಂದು ಬಾಲಭವನ ಆವರಣ ಕಬ್ಬನ್ ಪಾರ್ಕ್‌ನಲ್ಲಿ **ಚಿತ್ರಕಲಾ ಸ್ಪರ್ಧೆಯಲ್ಲಿ** ಭಾಗವಹಿಸಲಾಯಿತು.

20.ದಿ. 07-12-2019 ರಂದು **ಸಮರ್ಥನಂ ಸಂಸ್ಥೆಯು** ಏರ್ಪಡಿಸಿದ ಬೆಂಗಳೂರು **ವಾಕಥಾನ್ 2019** ಕಿತ್ತೂರು ರಾಣಿ ಚೆನ್ನಮ್ಮ ಸ್ಟೇಡಿಯಂ ಬೆಂಗಳೂರು. ಇಲ್ಲಿ ಮಕ್ಕಳು ಭಾಗವಹಿಸಿದ್ದರು.

21.ದಿ. 8-12-2019 ರಂದು **VFC** ಸಂಘಟನೆರವರು **New Horizon schoolarathahalli Bangaloreನಲ್ಲಿ CARNIVOL 2019 ( A Special Fest for the Specialbled)** ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.

22.ದಿ. 29-12-2019 ರಂದು **ಮದರ್ ಥೆರಸ ಯೂತ್ ಅಸೋಸಿಯೇಷನ್** ರವರಿಂದ ಶಾಲೆಯಲ್ಲಿ **ಕ್ರಿಸ್‌ಮಸ್** ಹಬ್ಬವನ್ನು ಶಾಲ ಮಕ್ಕಳೊಂದಿಗೆ ಆಚರಿಸಲಾಯಿತು.

23.ದಿ. 01-01-2020ರಂದು **ಹೊಸ ವರ್ಷಾಚರಣೆಯನ್ನು** ಆಚರಿಸಲಾಯಿತು.

24.ದಿ. 24-01-2020-**ಶಾಶ್ವತಿ ಸೇವಾ ಸಮಿತಿ**ರವರು ನಡೆಸಿದ ಬುದ್ಧಿಮಾಂದ್ಯ ಮಕ್ಕಳ **ಕ್ರೀಡಾಕೂಟದಲ್ಲಿ** ಪಾಲ್ಗೊಳ್ಳಲಾಯಿತು. ಮಕ್ಕಳು ಕೆಲವು ಬಹುಮಾನಗಳನ್ನು ಪಡೆದರು. ಶಾಲೆಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

25.ದಿ.25-01-2020 ರಂದು **ಡಾ. ನಾಗೇಂದ್ರ ಪ್ರಸದ್**ರವರು ಆದಿತ್ಯ ಅಪಾರ್ಟ್‌ಮೆಂಟ್ ಸಭಾಂಗಣದಲ್ಲಿ ನಡೆಸಿಕೊಟ್ಟ **ಸಂಕ್ರಾಂತಿ ಸಂಭ್ರಮ** ಕಾರ್ಯಕ್ರಮದಲ್ಲಿ ಭಾಗವಹಿಸಲಾಗಿತ್ತು.

26.ದಿ. 26-01-2020 ಶಾಲೆಯಲ್ಲಿ **ಗಣರಾಜ್ಯ ದಿನಾಚರಣೆಯನ್ನು** ಆಚರಿಸಲಾಯಿತು.

27.ದಿ.. 31.01.2020-**ರಾಜಾಜಿನಗರ ಯುವಕರ ಸಮಾಜ ಸೇವಾ ಸಂಘದವರು** ಏರ್ಪಡಿಸಿದ್ದ **ಕ್ರೀಡಾಕೂಟದಲ್ಲಿ** ಭಾಗವಹಿಸಲಾಯಿತು. ಬಹುಮಾನಗಳನ್ನು ಪಡೆದು ನೆನಪಿನ ಕಾಣಿಕೆ ಪಡೆಯಲಾಯಿತು.

28.ದಿ. 02-02-2020-ಶಾಲಾ **ಶೈಕ್ಷಣಿಕ ಪ್ರವಾಸವನ್ನು** ಮೈಸೂರು ಮೃಗಾಲಯಕ್ಕೆ ಕರೆದು ಕೊಂಡು ಹೋಗಲಾಗಿತ್ತು.

29.ದಿ.11-02-2020 **ಸಮರ್ಥನಂ ಟ್ರಸ್ಟ್‌ವತಿಯಿಂದ** ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಿತ್ತು.

30.ದಿ.16.02.2020 ರಂದು **ನವ ನಾಸ್ಯ ಫೌಂಡೇಷನ್**ರವರು ಇನೋವೇಷನ್ ಮಾಲ್ ಜೆ.ಪಿನಗರದಲ್ಲಿ ಆಯೋಜಿಸಲಾಗಿದ್ದ **Fashion show** ನಲ್ಲಿ ಭಾಗವಹಿಸಲಾಗಿತ್ತು.

31.ದಿ.13-03-2020ರಂದು ಶ್ರೀ ಶಾರದ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು.

32.**Novel Coronavirus (COVID-19) ನ ವೈರಸ್ ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಸಲುವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆಯನ್ವಯ ಶಾಲೆಗೆ ದಿನಾಂಕ 13.03.2020 ರಿಂದ ರಜೆ ನೀಡಲಾಗಿತ್ತು.**

ಸಂಸ್ಥೆಯು ಮೇಲಿನ ಶಾಲಾ ಚಟುವಟಿಕೆಗಳ ಜೊತೆ ರೋಟರಿ ಕ್ಲಬ್, ಇನ್ನರ್‌ವೀಲ್ ಕ್ಲಬ್, ಲಯನ್ ಕ್ಲಬ್ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಣ್ಣಿನ ತಪಾಸಣೆ ಶಿಬಿರ, ದಂತ ತಪಾಸಣೆ ಶಿಬಿರ, ಆರೋಗ್ಯ ಶಿಬಿರ ಮತ್ತು ವಿಕಲಚೇತನರಿಗೆ/ ಹಿರಿಯ ನಾಗರೀಕರಿಗೆ ದೊರೆಯುವ ಸರ್ಕಾರಿ ಸೌಲಭ್ಯಗಳು ನೆರವಿನ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು, ಮಹಿಳೆಯರು ಹಾಗೂ ಹಿಂದುಳಿದ ಮಕ್ಕಳು ಸಮಾಜದ ನಿರ್ಲಕ್ಷಕ್ಕೆ ಒಳಗಾದ ಸಮುದಾಯಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಉತ್ತಮ ಆರೋಗ್ಯಕರವಾದ ಸಮಾಜವನ್ನು ನಿರ್ಮಿಸುವಲ್ಲಿ ಅಳಿಲು ಸೇವೆಯನ್ನು ಮಾಡುತ್ತಾ ಬರುತ್ತಿದೆ.

**ತಮ್ಮ ವಿಶ್ವಾಸಿ**

**(ಎ.ಎಂ.ಉಮಾ)**

**ಕಾರ್ಯದರ್ಶಿ**

# VIJAYANAGAR DISABLED WELFARE ASSOCIATION®

(VIKASA SPECIAL SCHOOL)

9th main, R.P.C. Layout, (Near Vishwakarma Temple) vijayanagar 2nd stage,
Hampinagar Bangalore - 560104


## 2018–19ನೇ ಸಾಲಿನ ವಾರ್ಷಿಕ ವರದಿ

1. ದಿ. 21.05.2018–ಶಾಲೆಯು ಪುನ: ಪ್ರಾರಂಭವಾಯಿತು.
2. ದಿ. 05.06.2018–ವಿಶ್ವಪರಿಸರ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
3. ದಿ. 21.06.2018–ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದ್ದು. ಮಕ್ಕಳು ಯೋಗ ಮಾಡಿ ಪ್ರಮಾಣಪತ್ರ ಮತ್ತು ಬಹುಮಾನವನ್ನು ಪಡೆದಿರುತ್ತಾರೆ.
4. ದಿ. 12.07.2018–ಪೋಷಕರ ಸಭೆಯನ್ನು ಏರ್ಪಡಿಸಿ ಪೋಷಕರೊಂದಿಗೆ ಮಕ್ಕಳ ಸಮಸ್ಯೆಗಳ ಬಗ್ಗೆ ಮತ್ತು ಮುಂದಿನ ಬೆಳವಣಿಗೆ ಕುರಿತು ಚರ್ಚಿಸಲಾಯಿತು.
5. ದಿ. 21.07.2018–ಬೆಂಗಳೂರಿನ ವಿಶ್ವವಿದ್ಯಾನಿಲಯದಚರಕವನದಲ್ಲಿ ಮಕ್ಕಳಿಗೆ Eco Theraphy ಹಾಗೂ Music Theraphyಗೆ ಕರೆದುಕೊಂಡು ಹೋಗಲಾಯಿತು.
6. ದಿ. 15.08.2018–ಶಾಲಾ ಆವರಣದಲ್ಲಿ ನಮ್ಮರಾಷ್ಟ್ರೀಯ ಹಬ್ಬ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.
7. ದಿ. 06.09.2018–ಲಯನ್ಸ್‌ಕ್ಲಬ್ ತುಮಕೂರುರವರಿಂದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು.
8. ದಿ. 19.09.2018–ಗಣೇಶ ಚತುರ್ಥಿ ಹಬ್ಬವನ್ನು ಆಚರಿಸಲಾಯಿತು.
9. ದಿ. 02.10.2018–ಗಾಂಧಿಜಯಂತಿ ದಿನಾಚರಣೆಯನ್ನುಆಚರಿಸಲಾಯಿತು.
10. ದಿ. 17.11.2018–ಗೀತಾಂಜಲಿ ಸಂಸ್ಥೆ ಗಂಗಾನಗರಇದರ ಬೆಳ್ಳಿ ಹಬ್ಬದಆಚರಣೆಯನ್ನು ಸುಮಂಗಲಿ ಸೇವಾ ಸಂಸ್ಥೆಯಲ್ಲಿನಡೆಸಿದ್ದು ಕಾರ್ಯಕ್ರಮದಲ್ಲಿ ನಮ್ಮ ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿರುತ್ತಾರೆ.
11. ದಿ. 20.11.2018–ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಕಂಠೀರವ ಸ್ಟೇಡಿಯಂನಲ್ಲಿ ನಡೆದ ಕ್ರೀಡಾಕೂಟದಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಲಾಗಿತ್ತು.
12. ದಿ. 23.11.2018–ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಬಾಲಭವನದಲ್ಲಿ ನಡೆದ ನೃತ್ಯದಲ್ಲಿ ಮಕ್ಕಳು ಭಾಗವಹಿಸಿದರು ಹಾಗೂ ಶಾಲೆಯಲ್ಲಿ ಸಾಯೀಗಿರಿಧರ್‌ರವರ ನೇತೃತ್ವದಲ್ಲಿ ಶ್ರೀ ಪುಟ್ಟಪರ್ತಿ ಸಾಯಿಬಾಬಾರವರ ಪೂಜೆಯನ್ನು ಏರ್ಪಡಿಸಲಾಯಿತು.
13. ದಿ. 24.11.2018–ಬಾಲಭವನಕಬ್ಬನ್ ಪಾರ್ಕ್‌ಗೆ ವಿಶ್ವಅಂಗವಿಕಲರ ದಿನಾಚರಣೆ ಪರವಾಗಿ ನಡೆದಚಿತ್ರಕಲೆ ಸ್ಪರ್ಧೆಗೆ ಆಯ್ಕೆಯಾದ ಮಕ್ಕಳನ್ನು ಕರೆದುಕೊಂಡು ಹೋಗಲಾಗಿತ್ತು. ಉಳಿದ ಮಕ್ಕಳನ್ನು ಬನ್ನೆರುಘಟ್ಟ ಶಿವನಹಳ್ಳಿಯಲ್ಲಿನ ರಾಮ ಕೃಷ್ಣ ಆಶ್ರಮಕ್ಕೆ Eco Theraphy / Music Theraphyಗೆ ಕರೆದುಕೊಂಡು ಹೋಗಲಾಯಿತು.
14. ದಿ. 03.12.2018–ವಿಶ್ವ ಅಂಗವಿಕಲರ ದಿನಾಚರಣೆಯನ್ನು ಸ್ವಾತಂತ್ರ್ಯ ಉದ್ಯಾನವನದಲ್ಲಿ ಆಚರಿಸಿದ್ದು. ಮಕ್ಕಳು ಮತ್ತು ಶಿಕ್ಷಕರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.
15. ದಿ. 08.12.2018–ಸಮರ್ಥನಂ ಸಂಸ್ಥೆಯು ಏರ್ಪಡಿಸಿದ ಬೆಂಗಳೂರು ವಾಕತನ್ 2018 (Walkathon)ಕಿತ್ತೂರುರಾಣಿಚೆನ್ನಮ್ಮಸ್ಟೇಡಿಯಂ ಬೆಂಗಳೂರು. ಇಲ್ಲಿ ಮಕ್ಕಳು ಭಾಗವಹಿಸಿದ್ದರು.

16. ದಿ. 11.01.2019–ರಾಜಾಜಿನಗರ ಯುವಕರ ಸಮಾಜ ಸೇವಾ ಸಂಘದವರು ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ಭಾಗವಹಿಸಲಾಯಿತು. ಬಹುಮಾನಗಳನ್ನು ಪಡೆದು ನೆನಪಿನ ಕಾಣಿಕೆ ಪಡೆಯಲಾಯಿತು.

17. ದಿ. 18.01.2019–ಶಾಶ್ವತಿ ಸೇವಾ ಸಮಿತಿರವರು ನಡೆಸಿದ ಬುದ್ಧಿಮಾಂದ್ಯ ಮಕ್ಕಳ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಾಯಿತು. ಮಕ್ಕಳು ಕೆಲವು ಬಹುಮಾನಗಳನ್ನು ಪಡೆದರು. ಶಾಲೆಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

18. ದಿ. 24.01.2019–ಶಾಲೆಯಲ್ಲಿ ಮಕ್ಕಳಿಗೆ ಲೋಕರಕ್ಷಕದವರಿಂದ ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು.

19. ದಿ. 25.01.2019–ಶಾಲಾ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿ ಮಕ್ಕಳನ್ನು **Innovative** Film Cityಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿತ್ತು.

20. ದಿ. 26.01.2019–South western railway constriction organisation Bangalore ಇಲ್ಲಿ ಗಣರಾಜ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಕ್ಕಳಿಂದ ರಾಷ್ಟಗೀತೆ ಮತ್ತು ನೃತ್ಯ ಮಾಡಲಾಯಿತು. ಮಕ್ಕಳು ಬಹುಮಾನಗಳನ್ನು ಪಡೆದರು. ಹಾಗೂ ಶಾಲೆಯಲ್ಲಿ ಗಣರಾಜ್ಯ ದಿನಾಚರಣೆ ಆಯೋಜಿಸಲಾಯಿತು.

21. ದಿ. 27.02.2019–**ಇಂದಿರಾಗಾಂಧಿ ಮ್ಯೂಸಿಕಲ್ ಪೌಂಡೇಶನ್‌ಆಡಿಟೋರಿಯಂ** ಬೆಂಗಳೂರು ಇಲ್ಲಿ ಮಕ್ಕಳಿಗೆ Eco Theraphy /Music Theraphy ಗೆ ಕರೆದುಕೊಂಡು ಹೋಗಲಾಯಿತು. ಹಾಗೂ ಹಲವು ಮಕ್ಕಳು ಮತ್ತು ಸಿಬ್ಬಂದಿರವರು ಆದಮ್ಯ ಚೇತನ ಸಂಸ್ಥೆ ರವರು ಆಯೋಜಿಸಿದ್ದ ಪರಿಸರ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

22. ದಿ. 15.03.2019–21ನೇ ವರ್ಷದ ಶಾಲಾ ವಾರ್ಷಿಕೋತ್ಸವ ಮತ್ತು ಶಾರದಾ ಪೂಜೆಯ ಕಾರ್ಯಕ್ರಮ ನಡೆಸಲಾಯಿತು.

23. ದಿ. 23.03.2019–ಬೆಂಗಳೂರಿನ ವಿಶ್ವವಿದ್ಯಾನಿಲಯದ ಚರಕವನದಲ್ಲಿ ಮಕ್ಕಳಿಗೆ Eco Theraphy /Music Theraphy ಕರೆದುಕೊಂಡು ಹೋಗಲಾಯಿತು.

24. ದಿ. 01.04.2019–ತ್ರಿವಿಧ ದಾಸೋಹಿ ಡಾ. ಶ್ರೀ.ಶ್ರೀ.ಶ್ರೀ. ಶಿವಕುಮಾರಸ್ವಾಮಿಜಿರವರ 112ನೇ ಜನ್ಮದಿನೋತ್ಸವ ಜಯಂತಿಯನ್ನು ಶಾಲೆಯಲ್ಲಿ ಹಮ್ಮಿಕೊಂಡು ಅದರ ಪ್ರಯುಕ್ತ ಅನ್ನಸಂತರ್ಪಣೆಯನ್ನು ನಡೆಸಲಾಯಿತು.

25. ದಿ. 05.04.2019 – ಡಾ. ನಾಗೇಂದ್ರ ಪ್ರಸಾದ್‌ರವರ ಮನೆಯಲ್ಲಿ ಮಕ್ಕಳಿಗಾಗಿ ಯುಗಾದಿ ಹಬ್ಬದ ಆಚರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರಿಂದ ಮಕ್ಕಳು ಮತ್ತು ಸಿಂಬ್ಬಂದಿಗಳು ಭಾಗವಹಿಸಿದರು.

26. **ಶಾಲೆಗೆ ದಿನಾಂಕ 11.04.2019ರಿಂದ ದಿ.19.05.2019ರವರೆಗೆ ಬೇಸಿಗೆ ರಜೆ ನೀಡಲಾಗಿತ್ತು.**

ಸಂಸ್ಥೆಯು ಮೇಲಿನ ಶಾಲಾ ಚಟುವಟಿಕೆಗಳ ಜೊತೆರೋಟರಿಕ್ಲಬ್, ಇನ್ನರ್‌ವೀಲ್‌ಕ್ಲಬ್, ಲಯನ್‌ಕ್ಲಬ್ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಣ್ಣಿನ ತಪಾಸಣೆ ಶಿಬಿರ, ದಂತ ತಪಾಸಣೆ ಶಿಬಿರ, ಆರೋಗ್ಯ ಶಿಬಿರ ಮತ್ತು ವಿಕಲಚೇತನರಿಗೆ/ ಹಿರಿಯ ನಾಗರೀಕರಿಗೆದೊರೆಯುವ ಸರ್ಕಾರಿ ಸೌಲಭ್ಯಗಳು ನೆರವಿನ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು ಮಹಿಳೆಯರಿಗೆ ಹಾಗೂ ಸಮಾಜದ ನಿರ್ಲಕ್ಷಕ್ಕೆ ಒಳಗಾದ ಸಮುದಾಯಗಳ ಹಲವಾರು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಉತ್ತಮಆರೋಗ್ಯಕರವಾದ ಸಮಾಜವನ್ನು ನಿರ್ಮಿಸುವಲ್ಲಿ ಅಳಿಲು ಸೇವೆಯನ್ನು ಮಾಡುತ್ತಾ ಬರುತ್ತಿದೆ.

ತಮ್ಮ ವಿಶ್ವಾಸಿ

Amuma

**(ಎ.ಎಂ.ಉಮಾ)**

**ಕಾರ್ಯದರ್ಶಿ**